# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 267 |
| ಸದಸ್ಯರ ಹೆಸರು | : | ಶ್ರೀ. ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-07-2019 |
| ಉತ್ತರಿಸುವ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಶಾಲೆಗಳು ಸ್ವಂತವಾಗಿ ನೀರಿನ ಮೂಲಗಳನ್ನು ಹೊಂದಿವೆ; | ಕರ್ನಾಟಕ ರಾಜ್ಯದಲ್ಲಿ ಒಟ್ಟು 48166 ಶಾಲೆಗಳಿವೆ. (ಕಿರಿಯ ಪ್ರಾಥಮಿಕ ಶಾಲೆಗಳು-20991, ಹಿರಿಯ ಪ್ರಾಥಮಿಕ ಶಾಲೆಗಳು-22480, ಪ್ರೌಢಶಾಲೆಗಳು-4695) ಇವುಗಳ ಪೈಕಿ 4297 ಶಾಲೆಗಳಲ್ಲಿ ಕೊಳವೆ ಬಾವಿ ಹಾಗೂ 3685 ಶಾಲೆಗಳಲ್ಲಿ ತೆರೆದ ಬಾವಿ ಸೌಲಭ್ಯ ಹೊಂದಿರುತ್ತದೆ. |
| (ಆ) ಬರಪೀಡಿತ ಎಂದು ಘೋಷಿಸಲ್ಪಟ್ಟ ತಾಲ್ಲೂಕುಗಳಲ್ಲಿನ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಮತ್ತು ಕುಡಿಯುವ ನೀರಿನ ನಿರ್ವಹಣೆಗಾಗಿ ಅನುಸರಿಸುತ್ತಿರುವ ಕ್ರಮಗಳೇನು; | ಬರಪೀಡಿತ ಎಂದು ಬೇಸಿಗೆ ರಜೆ ಅವಧಿಯಲ್ಲಿ ಘೋಷಿಸಲ್ಪಟ್ಟ ರಾಜ್ಯದ 162 ತಾಲ್ಲೂಕುಗಳಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1 ರಿಂದ 10ನೇ ತರಗತಿಯ ಒಟ್ಟು 49,95,271 ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಲು ಯೋಜಿಸಲಾಗಿತ್ತು. ಇವರ ಪೈಕಿ ಇಚ್ಛೆಯುಳ್ಳ ಒಟ್ಟು 14,31,089 ವಿದ್ಯಾರ್ಥಿಗಳು ಬಿಸಿಯೂಟ ಸೇವಿಸಿರುತ್ತಾರೆ. ಕುಡಿಯುವ ನೀರಿನ ನಿರ್ವಹಣೆಗಾಗಿ ನೀರಿನ ಕೊರತೆ ಬಾರದಂತೆ ಕ್ರಮವಹಿಸಲು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಪತ್ರ ಬರೆದು ಸೂಚನೆ ನೀಡಲಾಗಿದೆ (ಅನುಬಂಧ-1 ಲಗತ್ತಿಸಿದೆ).<br>ಬರಗಾಲದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ನಿರ್ವಹಣೆಗಾಗಿ ಶುದ್ಧ ಕುಡಿಯುವ ನೀರಿನ ಘಟಕ ಇರುವ ಕಡೆ ಕ್ಯಾನ್ ಗಳಲ್ಲಿ ಭರ್ತಿ ಮಾಡಿ ಒದಗಿಸಲಾಗಿರುತ್ತದೆ. ನಗರ ಪ್ರದೇಶಗಳಲ್ಲಿ ನೀರಿನ ಕೊರತೆ ಇರುವ ಶಾಲೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಪಡೆದು ಶುದ್ಧೀಕರಿಸಿ ಕುಡಿಯಲು ಬಳಸಲಾಗಿದೆ. |

| | | |
|---|---|---|
| (ಇ) | ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದ ದಿನದಿಂದಲೇ ಶೇ. 100 ರಷ್ಟು ಹಾಜರಾತಿಗೆ ನಿರ್ದೇಶನ ನೀಡಲಾಗಿದ್ದು, ಈ ಪೂರ್ಣ ಹಾಜರಾತಿಯನ್ನು ಸಾಧಿಸಿದ ಸಂದರ್ಭದಲ್ಲಿ ಬರಪೀಡಿತ ಭಾಗದ ಶಾಲೆಗಳಲ್ಲಿ ಬಿಸಿಯೂಟ, ಕುಡಿಯುವ ನೀರು ಮತ್ತು ಸ್ವಚ್ಛತೆಗೆ ಆ ಪ್ರಮಾಣದಲ್ಲಿನ ನೀರಿನ ನಿರ್ವಹಣೆ ಸವಾಲಾಗಿ ಪರಿಣಮಿಸಿದೆಯೇ; | ಈ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಯವರಿಗೆ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನೀರಿನ ಅಭಾವ ಇರುವ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಾಲೆಗಳಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆಯಡಿ ಬಿಸಿಯೂಟ ತಯಾರಿಸಲು ಹಾಗೂ ಮಕ್ಕಳು ಕುಡಿಯಲು ಅಗತ್ಯವಿರುವ ಶುದ್ಧ ನೀರನ್ನು ಪೂರೈಸಲು ಸಾಕಷ್ಟು ಪ್ರಮಾಣದಲ್ಲಿ ಟ್ಯಾಂಕರ್ ಗಳ ಮೂಲಕ ಶುದ್ಧ ನೀರನ್ನು ಪೂರೈಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿದೆ (ಅನುಬಂಧ-2 ಲಗತ್ತಿಸಿದೆ). |
| (ಈ) | ಆ ಪರಿಣಾಮವು ಮಕ್ಕಳ ಶೇ. 100ರ ಹಾಜರಾತಿಯು ಇಳಿಮುಖವಾಗಲು ಕಾರಣವಾಗಬಲ್ಲ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇಲಾಖೆಯು ಮುಂಜಾಗ್ರತೆಯಾಗಿ ಕಂಡುಕೊಂಡ ಮಾರ್ಗೋಪಾಯಗಳೇನು? | ಮಕ್ಕಳ ಹಾಜರಾತಿಯು ಇಳಿಮುಖವಾಗದಂತೆ ತಡೆಯುವ ಸಲುವಾಗಿ ಆಯಾ ಜಿಲ್ಲೆಯ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ಸಹಕಾರದೊಂದಿಗೆ ಅಗತ್ಯ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ (ಅನುಬಂಧ-2 ರಂತೆ). |

ಇಪಿ 12 ಎಂ.ಎಂ.ಎಸ್ 2019

(ಎಸ್.ಆರ್. ಶ್ರೀನಿವಾಸ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

LCQ - 267

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಎಂ2/ಅ.ದಾ/ಬರಗಾಲ ಪೀಡಿತ ಪ್ರದೇಶ/ಬಿ/60/2019 ದಿನಾಂಕ: 28.02.2019

**ಸುತ್ತೋಲೆ**

ವಿಷಯ: ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮವನ್ನು ಬೇಸಿಗೆ ರಜಾ ಅವಧಿಯಲ್ಲಿ ಅನುಷ್ಠಾನಗೊಳಿಸಲು ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶದ ಸಂಖ್ಯೆ: ಕಂಇ 319 ಟಿ.ಎನ್.ಆರ್. 2018 ಬೆಂಗಳೂರು, ದಿನಾಂಕ:29.12.2018 ಮತ್ತು 01.01.2019

2. ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: WP(C) 196/2004 ದಿನಾಂಕ: 20-04-2004

*****

2018-19ನೇ ಸಾಲಿನಲ್ಲಿ ಕಂದಾಯ ಇಲಾಖೆಯು ರಾಜ್ಯದ 30 ಜಿಲ್ಲೆಗಳ 156 ಕಂದಾಯ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಉಲ್ಲೇಖ (1)ರಲ್ಲಿ ಘೋಷಿಸಿ ಆದೇಶಿಸಿದೆ.

ಉಲ್ಲೇಖ (02) ಘನ ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಬೇಸಿಗೆ ರಜೆಯಲ್ಲಿಯೂ ಸಹ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1-9ನೇ ತರಗತಿ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟವನ್ನು ನೀಡಬೇಕಾಗಿರುತ್ತದೆ. 2019ರ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ನೀಡಲಾಗುವ ಬೇಸಿಗೆ ರಜೆಯ ಅವಧಿ ದಿನಾಂಕ: 11-04-2019 ರಿಂದ ದಿನಾಂಕ: 28-05-2019ರವರೆಗೆ ಇದ್ದು, ಈ ಅವಧಿಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಮತ್ತು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ಈ ಮೂಲಕ ಸೂಚಿಸಿದೆ.

1. **ಬೇಸಿಗೆ ರಜಾ ಅವಧಿಯಲ್ಲಿ ಅಡುಗೆ ಕೇಂದ್ರಗಳನ್ನು ಗುರುತಿಸುವಿಕೆ:**

ಅ. ಪ್ರಸ್ತುತ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದ್ದು, ಬೇಸಿಗೆ ರಜಾ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧ ಯಾವ ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದಲ್ಲಿ ಅಂತಹ ಶಾಲೆಗಳ ಪೈಕಿ ಹೆಚ್ಚು ಮಕ್ಕಳಿರುವ ಶಾಲೆಯನ್ನು ಈ ಅವಧಿಗೆ ಮಾತ್ರ ಕೇಂದ್ರ ಶಾಲೆ ಎಂದು ಗುರುತಿಸಿ, ಆ ಶಾಲೆಯನ್ನು ಅಂತಿಮಗೊಳಿಸುವುದು. ಜೊತೆಗೆ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮಕ್ಕೆ ಶಾಲೆಗಳ ಪಟ್ಟಿಯನ್ನು ಅಂತಿಮಗೊಳಿಸುವುದು. ಜೊತೆಗೆ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮಕ್ಕೆ ಶಾಲೆಗಳ ಪಟ್ಟಿಯನ್ನು ಡೈಸ್ ಮಾಹಿತಿ ಆಧಾರದ ಮೇಲೆ ಗುರುತಿಸಿ ಅಂತಿಮಗೊಳಿಸತಕ್ಕದ್ದು. ಈ ಸಂಬಂಧ ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮ್ಯಾಪಿಂಗ್ ಕಾರ್ಯವನ್ನು ಸಿ.ಆರ್.ಪಿ/ಇ.ಸಿ.ಓ ರವರ ಸಹಕಾರದೊಂದಿಗೆ ದಿನಾಂಕ: 15-03-2019ರ ಒಳಗಾಗಿ ಪೂರ್ಣಗೊಳಿಸತಕ್ಕದ್ದು. ನಂತರ ಉಪನಿರ್ದೇಶಕರು (ಆಡಳಿತ) ರವರು ಪರಿಶೀಲಿಸಿ ಅಂತಹ ಶಾಲೆಗಳ ಪಟ್ಟಿಯನ್ನು ವೆಬ್‌ಸೈಟ್ ನಲ್ಲಿ ದೊರೆಯುವಂತೆ ಕ್ರಮವಹಿಸುವುದು ಹಾಗೂ ದಿನಾಂಕ: 17-03-2019 ರಂದು ರಾಜ್ಯ ಕಛೇರಿಗೆ ಸಲ್ಲಿಸತಕ್ಕದ್ದು.

ಆ. ಮೇಲ್ಕಂಡಂತೆ ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದು, ಗುರುತಿಸಲ್ಪಟ್ಟ ಶಾಲೆಗೆ ಇತರೆ ಶಾಲೆಗಳ ಮುಖ್ಯ ಶಿಕ್ಷಕರು ಮಕ್ಕಳ ಪಟ್ಟಿಯನ್ನು ಗುರುತಿಸಲ್ಪಟ್ಟ ಶಾಲೆಯ ಮುಖ್ಯ ಶಿಕ್ಷಕರಿಗೆ ನೀಡುವುದು. ಅದಕ್ಕೆ ತಕ್ಕಂತೆ ಹಾಜರಾತಿ ಆಧಾರದ ಮೇಲೆ ಬಿಸಿಯೂಟ ಕಾರ್ಯಕ್ರಮವನ್ನು ನಿರ್ವಹಿಸಲು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳತಕ್ಕದ್ದು.

2. **ಬೇಸಿಗೆ ರಜಾ ಅವಧಿಯಲ್ಲಿ ಮಧ್ಯಾಹ್ನದ ಬಿಸಿಯೂಟ ಪಡೆಯುವ ಮಕ್ಕಳ ಕುರಿತು ಮಾಹಿತಿ:**

ಬೇಸಿಗೆ ರಜಾ ಅವಧಿಯಲ್ಲಿ ಎಲ್ಲಾ ಅರ್ಹ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟದ ಅವಕಾಶವಿದೆ. ಆದರೆ ಸಿದ್ಧಪಡಿಸಿದ ಆಹಾರವು ವ್ಯರ್ಥವಾಗದಂತೆ ಕ್ರಮವಹಿಸುವ ಸಲುವಾಗಿ ಮತ್ತು ಪೂರ್ವಸಿದ್ಧತಾ ಭಾಗವಾಗಿ ಈ ಅವಧಿಯಲ್ಲಿ ಬಿಸಿಯೂಟಕ್ಕೆ ಬರುವ ಮಕ್ಕಳ ಸಂಖ್ಯೆಯನ್ನು ಪಡೆಯುವ ಅವಶ್ಯಕತೆ ಇದ್ದು, ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು.

ಅ. ಪ್ರತಿ ಶಾಲೆಯ ಮುಖ್ಯ ಶಿಕ್ಷಕರು ಈ ಅವಧಿಯಲ್ಲಿ ಬಿಸಿಯೂಟ ವ್ಯವಸ್ಥೆ ಕುರಿತು ಪೋಷಕರ ಗಮನಕ್ಕೆ ತಂದು ಊಟ ಪಡೆಯುತ್ತಾರೆಯೇ, ಇಲ್ಲವೇ ಎಂಬ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು. ಈ ಸಂಬಂಧ ಪೋಷಕರಿಂದ ಒಪ್ಪಿಗೆಯನ್ನು ಪಡೆಯತಕ್ಕದ್ದು. (ಮಾದರಿ ನಮೂನೆ ಲಗತ್ತಿಸಿದೆ.)

ಆ. ಈ ರೀತಿ ಒಪ್ಪಿಗೆ ಪಡೆದ ಮಕ್ಕಳ ಸಂಖ್ಯೆಯ ಪಟ್ಟಿಯನ್ನು ಮುಖ್ಯ ಶಿಕ್ಷಕರು ಸಿದ್ಧಪಡಿಸಿಕೊಳ್ಳತಕ್ಕದ್ದು ಹಾಗೂ ಮ್ಯಾಪಿಂಗ್ ಪ್ರಕಾರವಾಗಿ ಗುರುತಿಸಲಾದ ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರಿಗೆ ನೀಡುವುದು ಆಯಾ ಶಾಲಾ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.

ಇ. ಈ ರೀತಿ ವಿವಿಧ ಶಾಲೆಗಳ ಮುಖ್ಯ ಶಿಕ್ಷಕರುಗಳಿಂದ ಮಕ್ಕಳ ಪಟ್ಟಿಯ ಕ್ರೋಢೀಕರಣದ ಆಧಾರದ ಮೇಲೆ ಯಾವ ಶಾಲೆಯಲ್ಲಿ ಅನುಷ್ಠಾನಗೊಳ್ಳುತ್ತಿದೆಯೋ ಆ ಶಾಲೆಯ ಮುಖ್ಯ ಶಿಕ್ಷಕರು ಸೂಕ್ತ ದಾಖಲೆಗಳೊಂದಿಗೆ ಬಿಸಿಯೂಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

ಈ. ಒಪ್ಪಿಗೆ ಪತ್ರ ನೀಡಿದ ಮಕ್ಕಳಿಗೆ ಮಾತ್ರ ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟ ಒದಗಿಸುವುದು. ಒಪ್ಪಿಗೆ ಪತ್ರ ನೀಡದೇ ಇರುವ ಮಕ್ಕಳಿಗೆ ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟ ಒದಗಿಸಲು ಅವಕಾಶವಿರುವುದಿಲ್ಲವಾದ್ದರಿಂದ ಪ್ರತಿ ವಿದ್ಯಾರ್ಥಿಗೂ ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟ ಒದಗಿಸುವ ಬಗ್ಗೆ ಮಾಹಿತಿ ಒದಗಿಸಿ ಒಪ್ಪಿಗೆ ಪತ್ರಕ್ಕೆ ಸಹಿ ಪಡೆಯಲು ಕ್ರಮವಹಿಸುವುದು.

ಉ. ಒಪ್ಪಿಗೆ ಪತ್ರ ನೀಡಿರುವ ಮಕ್ಕಳು ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟ ಸೇವಿಸುವಂತೆ ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವ ಮೂಲಕ ಎಲ್ಲಾ ಮಕ್ಕಳು ಬಿಸಿಯೂಟ ಸೇವಿಸುವಂತೆ ಸೂಕ್ತ ಕ್ರಮ ಕೈಗೊಳ್ಳುವುದು ಎಲ್ಲಾ ಮುಖ್ಯ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.

ಊ. ಮೇಲ್ಕಂಡ ಬಿಸಿಯೂಟ ಮಾಡುವ ಮಕ್ಕಳ ನಿರ್ವಹಣೆಯನ್ನು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು, ಸಿ.ಆರ್.ಪಿ/ಇ.ಸಿ.ಓ ಗಳ ಸಹಕಾರದೊಂದಿಗೆ ನಿರ್ವಹಿಸುವುದು.

3. **ಬೇಸಿಗೆ ರಜಾ ಅವಧಿಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಕರ್ತವ್ಯ ನಿರ್ವಹಿಸುವ ಶಿಕ್ಷಕರ ಗುರುತಿಸುವಿಕೆ:**

ಅ. ಮಧ್ಯಾಹ್ನ ಬಿಸಿಯೂಟಕ್ಕಾಗಿ ಗುರುತಿಸಲ್ಪಟ್ಟ ಅಡುಗೆ ಕೇಂದ್ರಗಳು/ಶಾಲೆಗಳಲ್ಲಿ ಕಾರ್ಯಕ್ರಮದ ಉಸ್ತುವಾರಿಗಾಗಿ ಮುಖ್ಯಶಿಕ್ಷಕರು ಅಥವಾ ಒಬ್ಬರು ಶಿಕ್ಷಕರನ್ನು ಗೊತ್ತುಪಡಿಸುವ ಪದ್ಧತಿ ಇದ್ದು, ಪ್ರಸ್ತುತ ಸಾಲಿನಲ್ಲಿ ಈ ಅವಧಿಯಲ್ಲಿ ಕಾರ್ಯನಿರ್ವಹಿಸಲು ಅಡುಗೆ ಕೇಂದ್ರವಾರು ಶಾಲೆಯ ಮುಖ್ಯಶಿಕ್ಷಕರು ಅಥವಾ ಒಬ್ಬರು ಶಿಕ್ಷಕರನ್ನು ನಿಯೋಜಿಸಿ ಗೊತ್ತುಪಡಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ಜ್ಞಾಪನ ಹೊರಡಿಸತಕ್ಕದ್ದು.

ಆ. ಒಂದು ವೇಳೆ ಗುರುತಿಸಲ್ಪಟ್ಟ ಶಾಲೆಯಲ್ಲಿ 250ಕ್ಕಿಂತ ಹೆಚ್ಚು ಮಕ್ಕಳು ನಿರಂತರವಾಗಿ ಬಿಸಿಯೂಟಕ್ಕೆ ಬರುತ್ತಿದ್ದಲ್ಲಿ ಅಂತಹ ಶಾಲೆಗಳಲ್ಲಿ ಮಾತ್ರ ಮತ್ತೊಬ್ಬರು ಹೆಚ್ಚುವರಿ ಶಿಕ್ಷಕರನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಯೋಜಿಸಿ ಆದೇಶಿಸತಕ್ಕದ್ದು.

ಇ. ಬೇಸಿಗೆ ರಜಾ ಅವಧಿಯಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಗಳಿಕೆ ರಜೆಯ ಅವಕಾಶವಿರುವುದರಿಂದ ಶಿಕ್ಷಕರ ನಿಯೋಜನೆಯನ್ನು ಸಮರ್ಪಕವಾಗಿ ಜ್ಞಾಪನದ ಮೂಲಕ ಆದೇಶಿಸುವುದು.

ಈ. ಬೇಸಿಗೆ ರಜಾ ಅವಧಿಯಲ್ಲಿ ಬಿಸಿಯೂಟಕ್ಕೆ ಗೊತ್ತುಪಡಿಸಲಾದ ಶಿಕ್ಷಕರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು, ಇದರಿಂದ ಪ್ರತಿದಿನ ಊಟ ಮಾಡಿದ ಫಲಾನುಭವಿಗಳ ವಿವರವನ್ನು ಎಸ್.ಎಂ.ಎಸ್. ಮೂಲಕ ಪಡೆಯಲು ಅನುಕೂಲವಾಗುತ್ತದೆ. ಪ್ರತಿದಿನದ ಹಾಜರಾತಿಯನ್ನು ಎಸ್.ಎಂ.ಎಸ್. ಮೂಲಕ ಪಡೆಯಲು ಕ್ರಮವಹಿಸಲಾಗುತ್ತಿದೆ.

LCQ - 267

**ನಮೂನೆ-1**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಬಿಸಿಯೂಟ ನೀಡುತ್ತಿರುವ ಶಾಲೆಯ ಹೆಸರು | ಯು-ಡೈಸ್ ಸಂಖ್ಯೆ | ಒಟ್ಟು ನೋಂದಾಯಿತ ಮಕ್ಕಳ ಸಂಖ್ಯೆ | ಬಿಸಿಯೂಟ ಸೇವಿಸಿದ ಫಲಾನುಭವಿಗಳ ಸಂಖ್ಯೆ | |
|---|---|---|---|---|---|---|---|
| | | | | | | | |
| | | | | | | | |

**ನಮೂನೆ-2**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಬಿಸಿಯೂಟ ಒದಗಿಸುತ್ತಿರುವ ಒಟ್ಟು ಶಾಲೆಗಳ ಸಂಖ್ಯೆ | ಒಟ್ಟು ನೋಂದಾಯಿತ ಮಕ್ಕಳ ಸಂಖ್ಯೆ | ಬಿಸಿಯೂಟ ಸೇವಿಸಿದ ಫಲಾನುಭವಿಗಳ ಸಂಖ್ಯೆ | ಷರಾ |
|---|---|---|---|---|---|---|
| | | | | | | |
| | | | | | | |

**10. ಕುಡಿಯುವ ನೀರು:**

ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಬಹುದಾಗಿದ್ದು, ಕುಡಿಯುವ ನೀರು ಮತ್ತು ಅಡುಗೆ ಮಾಡಲು ನೀರಿನ ತೊಂದರೆ ಉಂಟಾಗುವ ಸಂಭವವಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪತ್ರ ಬರೆದು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗೆ ನೀರಿನ ಕೊರತೆ ಬಾರದಂತೆ ನಿರ್ವಹಿಸಲು ಸೂಚನೆ ನೀಡಲು ಕ್ರಮವಹಿಸುವುದು.

ಮೇಲ್ಕಂಡ ವಿಷಯವು ಕಾಲಮಿತಿಗೆ ಒಳಪಟ್ಟ ವಿಷಯವಾಗಿದ್ದು, ನಿಗದಿಪಡಿಸಿರುವ ದಿನಾಂಕಗಳಂದೇ ಕ್ರಮವಹಿಸಿ, ರಾಜ್ಯ ಕಛೇರಿಗೆ ವರದಿ ಮಾಡುವುದು, ಯಾವುದೇ ನೆನಪೋಲೆ ಹಾಗೂ ಪತ್ರಗಳಿಗೆ ಅವಕಾಶವಿರುವುದಿಲ್ಲ.

(ಡಾ. ಪಿ.ಸಿ.ಜಾಫರ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
28/2/19

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
3. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಸಾರ್ವಜನಿಕ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಕಛೇರಿ ಪ್ರತಿ

4. ಅಡುಗೆ ಸಿಬ್ಬಂದಿ: ಅಡುಗೆ ಸಿಬ್ಬಂದಿಯನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹಾಲಿ ಇರುವ ಅಡುಗೆ ಸಿಬ್ಬಂದಿ ಯನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಲು ಅಡುಗೆ ಕೇಂದ್ರ ಹೊಂದಿರುವ ಮುಖ್ಯ ಶಿಕ್ಷಕರಿಗೆ ಅಧಿಕಾರ ನೀಡಲಾಗಿದೆ. ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಅಡುಗೆಯವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಡುಗೆಯವರ ಅವಶ್ಯಕತೆ ಇದ್ದಲ್ಲಿ, ಮ್ಯಾಪಿಂಗ್ ಮಾಡಿರುವ ಶಾಲೆಯಲ್ಲಿನ ಅಡುಗೆ ಸಿಬ್ಬಂದಿಯ ಸೇವೆಯನ್ನು ಪಡೆಯುವುದು. ಅಡುಗೆ ಸಹಾಯಕರು ಕಾರ್ಯ ನಿರ್ವಹಿಸಿದ ದಿನಗಳಿಗೆ ಮಾತ್ರ ಸಂಭಾವನೆಯನ್ನು ನೇರವಾಗಿ ಅಡುಗೆಯವರ ಖಾತೆಗೆ ಜಮಾ ಮಾಡುವುದು.

5. ಕೇಂದ್ರ ಶಾಲೆಯೆಂದು ಗುರುತಿಸಿರುವ ಶಾಲಾ ಮುಖ್ಯ ಶಿಕ್ಷಕರು ಆಹಾರ ಧಾನ್ಯಗಳ ಬೇಡಿಕೆಯನ್ನು ಸಲ್ಲಿಸುವ ಮುನ್ನ, ಈ ಕೇಂದ್ರ ಶಾಲೆಗೆ ಜೋಡಿಸಲ್ಪಟ್ಟ ಶಾಲೆಗಳ ಮುಖ್ಯ ಶಿಕ್ಷಕರು ಸಲ್ಲಿಸಿರುವ ಬಿಸಿಯೂಟವನ್ನು ಪಡೆಯಲು ಇಚ್ಚಿಸುವ ಮಕ್ಕಳ ಪಟ್ಟಿಯನ್ನು ಕ್ರೋಢೀಕರಿಸಿ ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) ರವರಿಗೆ ಸಲ್ಲಿಸುವುದು.

6. ಊಟ ಪಡೆಯಲು ಇಚ್ಚಿಸುವ ಮಕ್ಕಳ ಸಂಖ್ಯೆಯ ಆಧಾರದ ಮೇರೆಗೆ ಆಹಾರ ಧಾನ್ಯಗಳ ಬೇಡಿಕೆ ಮತ್ತು ಪರಿವರ್ತನಾ ವೆಚ್ಚ ಹಾಗೂ ಅಡುಗೆ ಸಿಬ್ಬಂದಿಯ ಗೌರವ ಧನದ ಬೇಡಿಕೆಯನ್ನು ಸಿ.ಆರ್.ಪಿ ರವರ ಮೂಲಕ ಅಥವಾ ನೇರವಾಗಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಿಗೆ ಮುಖ್ಯ ಶಿಕ್ಷಕರು/ಶಿಕ್ಷಕರು ದಿನಾಂಕ:25.03.2019ರೊಳಗೆ ಸಲ್ಲಿಸುವುದು.

---

7. ತಾಲ್ಲೂಕುವಾರು ಆಹಾರ ಧಾನ್ಯಗಳ ಬೇಡಿಕೆಯ ಇಂಡೆಂಟ್‌ನ್ನು ಕೆ.ಎಫ್.ಸಿ.ಎಸ್.ಸಿ ರವರಿಗೆ ಸಲ್ಲಿಸಿ ಆಹಾರ ಧಾನ್ಯಗಳು ಸರಬರಾಜಾಗುವಂತೆ ಅಕ್ಷರ ದಾಸೋಹ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.

8. ಸಾದಿಲ್ವಾರು ಅನುದಾನ ಮತ್ತು ಅಡುಗೆಯವರ ಗೌರವಧನವನ್ನು ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ಮುಂಗಡವಾಗಿ ಶಾಲೆಗಳ ಖಾತೆಗೆ ಜಮಾ ಮಾಡುವುದು. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) ಇವರ ಜವಾಬ್ದಾರಿಯಾಗಿರುತ್ತದೆ.

9. ಮೇಲುಸ್ತುವಾರಿ:

ಅ. ಸಂಬಂಧಿಸಿದ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ತಾಲ್ಲೂಕು ಹಂತದಲ್ಲಿ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ ಕಾರ್ಯಕ್ರಮದ ಅನುಷ್ಠಾನಕ್ಕೆ ರೂಪುರೇಷೆಗಳನ್ನು ಸಿದ್ಧಪಡಿಸಿ, ಮೇಲುಸ್ತುವಾರಿಗಾಗಿ ಪ್ರತ್ಯೇಕ ಸುತ್ತೋಲೆಯನ್ನು ಹೊರಡಿಸುವುದು.

ಆ. ತಾಲ್ಲೂಕು ಹಂತದಲ್ಲಿ ಬಿ.ಆರ್.ಸಿ ಮತ್ತು ಕ್ಲಸ್ಟರ್ ಹಂತದಲ್ಲಿ ಸಿ.ಆರ್.ಪಿ.ರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು.

ಇ. ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ.ರವರು ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು(ಆಡಳಿತ), ಪ್ರಾಂಶುಪಾಲರು ಮತ್ತು ಹಿರಿಯ ಉಪನ್ಯಾಸಕರು/ಉಪನ್ಯಾಸಕರು ಡಯಟ್ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟ ಒದಗಿಸುವ ಶಾಲೆಗಳಿಗೆ ಭೇಟಿ ನೀಡುವುದು. ಶಿಕ್ಷಣ ಇಲಾಖೆಯ ಅಧಿಕಾರಿಗಳ ಭೇಟಿಯ ಕುರಿತು ಉಪನಿರ್ದೇಶಕರು(ಆಡಳಿತ)ರವರು ತಮ್ಮ ಹಂತದಲ್ಲಿ ಒಂದು ಭೇಟಿ ಚೆಕ್‌ಲಿಸ್ಟ್‌ನೊಂದಿಗೆ ಸುತ್ತೋಲೆಯನ್ನು ಹೊರಡಿಸುವುದು.

ಇ. ಕ್ಲಸ್ಟರ್ ಹಂತದಲ್ಲಿ ಒಂದು ವೇಳೆ ಸಿ.ಆರ್.ಪಿ ಗಳು ಲಭ್ಯವಿಲ್ಲದ್ದಲ್ಲಿ ಶಿಕ್ಷಣ ಸಂಯೋಜಕರು/ಪ್ರೌಢಶಾಲಾ ಸಹಶಿಕ್ಷಕರನ್ನು ಗುರುತಿಸಿ ನೋಡಲ್ ಅಧಿಕಾರಿಯನ್ನಾಗಿ ನೇಮಿಸುವುದು.

ಈ. ಬೇಸಿಗೆ ರಜೆ ಅವಧಿಯಲ್ಲಿ ಬಿಸಿಯೂಟದ ಫಲಾನುಭವಿಗಳ ಮಾಹಿತಿಯನ್ನು ನಮೂನೆ-1ರಲ್ಲಿ ಶಾಲಾವಾರು ಮಾಹಿತಿಯನ್ನು ತಾಲ್ಲೂಕು ಹಂತದಲ್ಲಿ ಕ್ರೋಢಿಕರಿಸಿ ಶೇಕರಿಸಿಟ್ಟುಕೊಳ್ಳುವುದು. ನಮೂನೆ-02ರಲ್ಲಿ ತಾಲ್ಲೂಕುವಾರು ಜಿಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ರವರು ಈ ಕೆಳಕಂಡ ನಮೂನೆಯಲ್ಲಿ ಪ್ರತಿ 15 ದಿನಗಳಿಗೊಮ್ಮೆ ರಾಜ್ಯ ಕಛೇರಿಗೆ ಒದಗಿಸುವುದು. ಬೇಸಿಗೆ ರಜೆ ಅವಧಿ ಮುಗಿದ ನಂತರ ಜಿಲ್ಲಾವಾರು ಕ್ರೋಢೀಕೃತ ಮಾಹಿತಿಯನ್ನು ಒದಗಿಸುವುದು

LCQ-267

# ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು-09
**ದೂ.ಸಂ:22242943, ಫ್ಯಾಕ್ಸ್ :22271998, ಇ-ಮೇಲ್:jd_mms@yahoo.co.in**

ಸಂಖ್ಯೆ:ಎಂ2/ಅ.ದಾ/ಬರಗಾಲ ಪೀಡಿತ ಪ್ರದೇಶ/ಬಿ/60/2019 ದಿನಾಂಕ:02.07.2019

ರವರಿಗೆ,
ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ,

ಮಾನ್ಯರೆ,

**ವಿಷಯ:** ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಬಿಸಿ ಊಟ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು.
**ಉಲ್ಲೇಖ:** ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ 28.02.2019.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ,ಈ ಕಛೇರಿಯ ಉಲ್ಲೇಖಿತ ಸುತ್ತೋಲೆಯಲ್ಲಿ ಬರಪೀಡಿತ ಪ್ರದೇಶಗಳೆಂದು ಘೋಷಿಸಲ್ಪಟ್ಟ ತಾಲ್ಲೂಕುಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯ ಶಾಲೆಗಳಲ್ಲಿ ಬಿಸಿ ಊಟ ತಯಾರಿಸಲು ಹಾಗೂ ಮಕ್ಕಳು ಕುಡಿಯಲು ಶುದ್ಧ ನೀರಿನ ಸೌಲಭ್ಯ ಕಲ್ಪಿಸುವಂತೆ ಕೋರಲಾಗಿತ್ತು.

2019-20ನೇ ಶೈಕ್ಷಣಿಕ ವರ್ಷ ಆರಂಭವಾಗಿದ್ದು, ನೀರಿನ ಅಭಾವ ಮುಂದುವರೆದಿರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಪ್ರದೇಶಗಳ ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ ಅಡಿಯಲ್ಲಿ ಬಿಸಿಯೂಟವನ್ನು ತಯಾರಿಸಲು ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಊಟದ ಸಮಯದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕಿದ್ದು, ತಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರ ವಿಪತ್ತು ನಿರ್ವಹಣಾ ನಿಧಿಯಡಿ ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಖರ್ಚು-ವೆಚ್ಚ ಭರಿಸಿ ಬಿಸಿ ಊಟ ನೀಡುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕ್ರಮ ಕೈಗೊಳ್ಳುವಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರ ಸಹಕಾರವನ್ನು ಕೋರಲು ಈ ಮೂಲಕ ತಮ್ಮಲ್ಲಿ ಮನವಿ ಮಾಡಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,
2/7/2019
ಜಂಟಿ ನಿರ್ದೇಶಕರು
ಮಧ್ಯಾಹ್ನ ಉಪಹಾರ ಯೋಜನೆ
ಬೆಂಗಳೂರು

ಪ್ರತಿಯನ್ನು,
1) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ರವರಿಗೆ ಅಗತ್ಯ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ರವರಿಗೆ ಅಗತ್ಯ ಕ್ರಮಕ್ಕಾಗಿ.
3) ಕಛೇರಿ ಪ್ರತಿ

F:\267\267Final.docx